ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1262
ಸದಸ್ಯರ ಹೆಸರು	:	ಶ್ರೀ.ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	17-03-2021
ಉತ್ತರಿಸುವ ಸಚಿವರು	:	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಸಾಗರ ತಾಲ್ಲೂಕಿನ ಹಲ್ಕೆ ಗ್ರಾಮದಿಂದ ಕಾರ್ಗಲ್ – ಜೋಗಕ್ಕೆ ಸಂಪರ್ಕ ಕಲ್ಪಿಸುವ ಎಣ್ಣೆಹೊಳೆ ಹಿನ್ನೀರಿನಲ್ಲಿ ಸಂಚರಿಸುತ್ತಿದ್ದ ಹೊಸ ಲಾಂಚ್‌ನ್ನು ಸ್ಥಳಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಆ	ಈ ಲಾಂಚ್‌ನ್ನು ಎಲ್ಲಿಗೆ ಸ್ಥಳಾಂತರಿಸಲಾಗಿದೆ ಮತ್ತು ಏಕೆ ಎಂದು ಕಾರಣ ತಿಳಿಸುವುದು;	ಶಿವಮೊಗ್ಗ ವಲಯದ, ಸಾಗರ ಕಡವು ಸೇವೆಯ ಹಿನ್ನಿರಿನಲ್ಲಿ ಲಭ್ಯವಿದ್ದ ಒಂದು ಹೆಚ್ಚುವರಿ ಲಾಂಚನ್ನು ಚನಗೊಂಡ - ಸಿಗ್ಗೂ ಕಡವು ಸೇವೆಗೆ ಸ್ಥಳಾಂತರಿಸಲಾಗಿದೆ. ಚನಗೊಂಡ – ಸಿಗ್ಗೂರು ಕಡವು ಸೇವೆಗೆ ಲಾಂಚನ್ನು ಒದಗಿಸಲು, ಜನ ಪ್ರತಿನಿಧಿಗಳು ಹಾಗೂ ಸ್ಥಳೀಯರಿಂದ ಬಂದ ಕೋರಿಕೆಯ ಮೇಲೆ ಸ್ಥಳಾಂತರಿಸಲಾಗಿರುತ್ತದೆ.
ಇ	ಈ ಭಾಗದಲ್ಲಿ ಯಾವ ಯಾವ ಮಾರ್ಗದಲ್ಲಿ ಲಾಂಚಿನ ಅವಶ್ಯಕತೆ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಲ್ಲಿನ ಗ್ರಾಮಸ್ಥರು ಲಾಂಚ್ ಬೇಕೆಂದು ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಿರುತ್ತಾರೆಯೇ;	ಸದರಿ ಭಾಗದಲ್ಲಿ ಯಾವ ಯಾವ ಮಾರ್ಗದಲ್ಲಿ ಲಾಂಚಿನ ಅವಶ್ಯಕತೆ ಇರುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಚನಗೊಂಡ – ಸಿಗ್ಗೂರು ಕಡವು ಸೇವೆಗೆ ಲಾಂಚನ್ನು ಒದಗಿಸಲು ಮಾತ್ರ ಜನ ಪ್ರತಿನಿಧಿಗಳು ಹಾಗೂ ಸ್ಥಳೀಯರು ಬೇಡಿಕೆಯನ್ನು ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ, ಇವರಿಗೆ ಸಲ್ಲಿಸಿರುತ್ತಾರೆ.
ಈ	ಕಳೆದ ಚುನಾವಣೆಯಲ್ಲಿ ಚನ್ನಗೊಂಡ ಪಂಚಾಯಿತಿ ವ್ಯಾಪ್ತಿಯ ಸಿಗ್ಗು ಗ್ರಾಮಸ್ಥರು ಮತದಾನ ಬಹಿಷ್ಕಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ?	ಕಳೆದ ಡಿಸೆಂಬರ್ ಮಾಹೆಯಲ್ಲಿ ಚನ್ನಗೊಂಡ ಗ್ರಾಮ ಪಂಚಾಯಿತಿಗೆ ಸಾರ್ವತ್ರಿಕ ಚುನಾವಣೆ ನಡೆದಿದ್ದು, ಚನ್ನಗೊಂಡ ಗ್ರಾಮ ಪಂಚಾಯಿತಿಯ ಎಲ್ಲಾ 9 ಸ್ಥಾನಗಳಿಗೂ ಸದಸ್ಯರ ಆಯ್ಕೆಯಾಗಿರುತ್ತದೆ.

ಕಡತ ಸಂಖ್ಯೆ: IDD 23 BNS 2021 (E-458276)

(ಎಸ್.ಅಂಗಾರ) ... 2021

ಮೀನುಗಾರಿಕೆ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರು